ಮಲ್ಲಿಕಾರ್ಜುನ, ಸುರಧೇನುಪುರ

ಕಳ್ಳಬೆಕ್ಕು ಮನೆಯೊಳಗೆ; ನಿಯತ್ತಿನ ನಾಯಿ ಮನೆಯ ಹೊರಗೆ. ಏನಿದರ ಮರ್ಮ?



ಇದು ಲಂಕಾ ನ್ಯಾಯ – ಶೂರ್ಪನಖಿ ಒಳಗೆ, ವಿಭೀಷಣ ಹೊರಗೆ.

ಬಿ.ಆರ್. ಉಷಾ, ಬೆಂಗಳೂರು

ಹಳೇ ಹೀರೊಯಿನ್‌ಗಳಿಗೂ, ಹೊಸ ಹೀರೊಯಿನ್‌ಗಳಿಗೂ ಇರುವ ವ್ಯತ್ಯಾಸವೇನು?

ಹಳೆ ಹೀರೊಯಿನ್‌ಗಳು ನಾಚಬಲ್ಲರು. ಹೊಸ ಹೀರೊಯಿನ್‌ಗಳು ನಾಚ್ ಬಲ್ಲರು.

ಮಹಾವೀರ ಕಾಸರ, ಶಿವಮೊಗ್ಗ

ಶವಯಾತ್ರೆಗೆ ತಯಾರಿಸುವ ಮಂಟಪಕ್ಕೆ ವಿಮಾನ ಎಂದು ಕರೆಯುವುದೇಕೆ?

ಸತ್ತವರು ಆಕಾಶಕ್ಕೆ ಹೋಗುವರಲ್ಲ, ಮೇಲೊಯ್ಯುವುದು ವಿಮಾನವೇ.

ದಿನೇಶ್, ಗುಡ್ಡದೂರು

ಪೈಲಟ್ ಹೆಚ್ಚೋ, ನಾವಿಕ ಹೆಚ್ಚೋ, ಬಸ್ ಡ್ರೈವರ್ ಹೆಚ್ಚೋ?



ಬಸ್ ಡ್ರೈವರ್; ಮಿಕ್ಕಿಬ್ಬರಿಗೆ ಟ್ರಾಫಿಕ್ ಜಾಮ್, ತಿಕ್ಕಲು ಟ್ರಾಫಿಕ್ ಇರುವುದಿಲ್ಲ.

ಶ್ರುತಿ ರಿಗ್ರೆಟ್ ಅಯ್ಯರ್, ಅಮೆರಿಕಾ

ಸತ್ಯಹರಿಶ್ಚಂದ್ರ ಇಂದು ನಮ್ಮ ನಡುವೆ ಇದ್ದಿದ್ದರೆ ಏನಾಗುತ್ತಿತ್ತು?

'ಅಳಿವಿನ ಅಂಚಿನಲ್ಲಿರುವ ಪ್ರಾಣಿ' ಎಂದು ಮೃಗಾಲಯದಲ್ಲಿ ಪ್ರತ್ಯೇಕ ಪಂಜರದಲ್ಲಿ ಇರಿಸುತ್ತಿದ್ದರು.

ಜಗದೀಶ ಬಿ. ಹೊಸೂರು, ಮೈಸೂರು

ಸತ್ಯ, ವಾಸ್ತವ ಸತ್ಯ, ಕಟುಸತ್ಯ; ಈ ಮೂರರ ನಡುವಿನ ವ್ಯತ್ಯಾಸವೇನು?

ಸಮ್ಮತವಾದುದು ಸತ್ಯ; ಒಪ್ಪಿಸಬೇಕಾದ್ದು ವಾಸ್ತವ; ಒಪ್ಪಲಾಗದ್ದು ಕಟು.

ರಾಜೀವ್ ಎನ್. ಮಾಗಲ್, ಸಕಲೇಶಪುರ

'ರಸ್ತೆಯಲ್ಲಿ ನೀರು ನಿಂತಿದೆ. ಸಾರ್ವಜನಿಕರು ಸಹಕರಿಸಿ' – ಪ್ರಕಟಣೆ! ಸಾರ್ವಜನಿಕರ ಸಹಕಾರ ಎಂದರೇನು?

ನೀರು ಹಾರಿ ಕೊಳಕಾಗದಂತೆ ಬರ್ಮುಡಾ, ಶಾರ್ಟ್ಸ್ ಧರಿಸಿರೆಂದು!

ವಿ. ಹೇಮಂತಕುಮಾರ್, ಬೆಂಗಳೂರು

ಕೆಲವರು ಬಿಳಿ ಕಾಗೆ ನೋಡಿದೆ ಎನ್ನುತ್ತಾರೆ. ನಿಜವೇ?

ಹೂಂ. ಸರ್ಕಾರದ ಬಿಳಿ ಆನೆಗಳಿಗೆ 'ಕಾ ಕಾ' ಹಿಡಿಯುವುದು ಇವೇ.

ಎಲ್.ಐ.ಸಿ. ವಿಜೇಂದ್ರ, ಮೈಸೂರು

ಶ್ರೀಮಂತ ಹೆಣ್ಣುಮಕ್ಕಳೇಕೆ ತುಂಡು ಬಟ್ಟೆ ಧರಿಸುವುದು?

ಶ್ರೀಮಂತಿಕೆ ಪ್ರದರ್ಶಿಸಲು. ವಸ್ತ್ರಕ್ಕಿಂತ ಚರ್ಮ ಕಾಸ್ಟ್ಲಿ!

ಅನಸೂಯಾ ಟಿ, ಕೇದಿಗೆಮನೆ

ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ ಎನ್ನುವವರು ಎಲ್ಲಿಗೆ ಹೋಗಬೇಕು?

ರೌಂಡ್ ಟ್ರಿಪ್ ಇರುವ ಬಸ್ ಏರಿ ಕುಳಿತುಕೊಳ್ಳಬೇಕು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಬರೀ ಗಂಡು ಪಾತ್ರಗಳನ್ನು ಸೇರಿಸಿ ಸೀರಿಯಲ್ ತೆಗೆದರೆ ಹೇಗೆ?

ನಿರ್ಮಾಪಕನನ್ನು bury ಮಾಡಲೂ ಹಣ ಗಿಟ್ಟುವುದಿಲ್ಲ.

ನಾಗರಾಜ ಪಿ. ನಾಯ್ಕ ಹಳಗ, ಕಾರವಾರ

ಕಾಳಿ ಕಣಿವೆಯ ಮರಳುಗಾರಿಕೆಯಿಂದ ಏನ್ಯಾಗೇ ಕಂಟಕವಿದ್ದರೂ ಸ್ಥಗಿತಗೊಳಿಸದಿರಲು ಕಾರಣ?

ಲೂಟಿಶಿಖರಗಳ ದುರುಳಗಾರಿಕೆಯ ಪ್ರಭಾವ.

ಎಸ್. ಶರತ್, ಬೆಂಗಳೂರು

ಸಂಪ್ರದಾಯಸ್ಥರು ಆಷಾಢ ಬೇಗ ಮುಗಿಯಲೆಂದು ಹಾತೊರೆಯುವ ಕಾರಣ?

ಶ್ರಾವಣದಿಂದ ಶುರುವಾಗುವ ಹಬ್ಬಗಳ ಸಂಭ್ರಮ, ಸ್ವಾದಿಷ್ಟ ಭೋಜನಗಳು.

## ಬಹುಮಾನಿತ ಪ್ರಶ್ನೆ

ಉಷಾಲಕ್ಷ್ಮಿ ಅರವಿಂದ ಹೊಳ್ಳ, ಬೆಂಗಳೂರು

ಮಾನಕ್ಕೆ ಅಂಜುವವರು ಎಂದೂ ಮೌನಿ. ಯಾಕೆ?

ಒಡ್ಡೆ ಜಾಗದಲ್ಲಿರುವ ನಾಲಿಗೆ ಜಾರೀತೆಂಬ ಭಯ.

ಬಿ. ಬಸವರಾಜ್, ಹರಿಹರ

ಹಿತವಾದ ನೋವು ಯಾವುದು?

ಮಗುವನ್ನು ಮೊದಲ ದಿನ ಶಾಲೆಗೆ ಕಳುಹಿಸುವಾಗಿನ ಅಮ್ಮನ ನೋವು.

ಎಂ.ಜಿ. ಉಮಾ, ಬಳ್ಳಾರಿ

ತಿಳಿಯಬೇಕಾದ್ದು ಸಮುದ್ರದಷ್ಟು; ತಿಳಿದಿರುವುದು ಹನಿಯಷ್ಟು. ಇದು ಯಾರಿಗೆ ಹೊಂದುತ್ತೆ?

ಸಿಬಿಐಗೆ; ರಾಜಕಾರಣಿಗಳ ಹಗರಣಗಳನ್ನು ಕುರಿತು.

ಮುರಲೀಧರ ಕುಲಕರ್ಣಿ, ಬೀದರ್

ಜೀನ್ಸ್ ಧರಿಸುವ ತಾಯಂದಿರಿಂದ ಹಸುಗೂಸುಗಳು ಸೆರಗಿನ ಸುಖದಿಂದ ವಂಚಿತವಾಗುತ್ತಿವೆಯಲ್ಲ?



ಗ್ಲೋಬಲ್ ಮಗುವಲ್ಲವೆ! ಅಮೆರಿಕನ್ ಸ್ಟ್ಯಾಂಡರ್ಡ್‌ಗೆ ಆಗಿನಿಂದಲೇ ಒಗ್ಗಿಕೊಳ್ಳುತ್ತೆ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಅಳಿಯನ ಕುರುಡು ಬೆಳಗಾದರೆ ಗೊತ್ತಾಗುತ್ತೆ. ಸೊಸೆಯ ಕುರುಡು?

ಕತ್ತಲಲ್ಲೂ ಕೂಲಿಂಗ್ ಗ್ಲಾಸ್ ತೆಗೆಯದಿದ್ದಾಗ.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ

ಅಂದಿನ ವಠಾರದಲ್ಲಿದ್ದ ಆತ್ಮೀಯತೆ ಇಂದಿನ ಅಪಾರ್ಟ್‌ಮೆಂಟ್‌ಗಳಲ್ಲಿ ಇಲ್ಲವಲ್ಲ?

ಏಕೆಂದರೆ ಅದು 'ಒಂದೇ ಮಟ್ಟ'ದ ಜೀವನ; ಇದು 'ಮೇಲುಕೀಳು' ಅಂತಸ್ತಿನ ಜೀವನ.

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ

ಬಟ್ಟೆಬರೆಯಲ್ಲಿ ಬರೆ ಏಕೆ?

ಲಾಡಿ/ಎಲಾಸ್ಟಿಕ್ ಟೈಟ್ ಆದರೆ ಬರೆ ಮೂಡುತ್ತದಲ್ಲ.

■ ರಾಮ್